ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 79-84
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ‘ಸಗ್ಗ ಸುಖವನು ಬಯಸಿ’ ಕಥಾಸಂಕಲನದಲ್ಲಿ ಬದುಕಿನ ಪಾಠ

**ಸಿದ್ದೇಶ[1] ಮತ್ತು ಡಾ.ಟಿ.ಕೆ.ಕೆಂಪೇಗೌಡ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**
*ಅಂಚೆ ಇಲಾಖೆಯಲ್ಲಿ ನಿವೃತ್ತಿಯನ್ನು ಹೊಂದಿರುವ ಕೆ.ವಿ.ರಾಜೇಶ್ವರಿ ಅವರ ಕಥಾ ಸಂಕಲನವಾದ ‘ಸಗ್ಗ ಸುಖವನು ಬಯಸಿ’ ಎಂಬ ಕಥೆಗಳಲ್ಲಿ ನೊಂದ ಜೀವನದ ಬದುಕಿನಲ್ಲಿ ಕಲಿಯುವ ಪಾಠ ಸಾಕಷ್ಟಿದೆ ಎಂದು ಹೇಳುವ ಲೇಖಕರು ಕನ್ನಡ ಸಾಹಿತ್ಯದ ಎಲೆಮರೆಯ ಕಾಯಿಯ ಹಾಗೆ ಪ್ರಸ್ತುತ ಸಮಾಜಕ್ಕೆ ಗೋಚರವಾಗದೆ ಸಾಹಿತ್ಯ ಭಂಡಾರಕ್ಕೆ ಕಾದಂಬರಿಗಳು, ಕಥಾಸಂಕಲನ, ಪ್ರವಾಸ ಕಥನಗಳು, ಜೀವನ ಚರಿತ್ರೆ ಹಾಗೂ ಇತರೆ ಕೃತಿಗಳೊಂದಿಗೆ ಚಿರಪರಿಚತರಾಗುವಂತ ಅದ್ವಿತೀಯ ಸಾಧನೆಯತ್ತ ದಾಪುಗಾಲಾಕಿದ್ದಾರೆ, ಇಂತಹ ಪ್ರತಿಭೆ ಮತ್ತು ಸೃಜನಶೀಲ ಬರವಣಿಗೆ ಮರೆಮಾಚಿದಂತ್ತಿರದೆ ಗೋಚರವಾಗುವುದು ನಮ್ಮ ಕನ್ನಡ ಸಾಹಿತ್ಯಕ್ಕೆ ಸಾಹಿತ್ಯ ಭಂಡಾರವನ್ನು ಹೆಚ್ಚಿಸಿದಂತೆಯೇ ಸರಿ. ಸಹೃದಯರ ಮನ ಮುಟ್ಟುವಂತೆ ಸಾಹಿತ್ಯ ಕೃತಿಗಳನ್ನು ನೀಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕೆ.ವಿ. ರಾಜೇಶ್ವರಿ ಅವರ ‘ಸಗ್ಗ ಸುಖವನು ಬಯಸಿ’ ಕಥಾಸಂಕಲನದಲ್ಲಿನ ಬದುಕಿನ ಪಾಠ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕಥಾಸಂಕಲನ, ಕೆ.ವಿ.ರಾಜೇಶ್ವರಿ, ಸಗ್ಗ ಸುಖವನು ಬಯಸಿ*

## ಪೀಠಿಕೆ

ಸಮಾಜದಲ್ಲಿ ಹೆಣ್ಣು ಅಬಲೆ ಎಂದು ಆಕೆಯನ್ನು ತನಗೆ ಇಷ್ಟ ಬಂದ ಹಾಗೆ ಆಕೆಯನ್ನು ನೋಡುವುದು ಪುರುಷ ಸಮಾಜದಲ್ಲಿ ದೊಡ್ಡ ತಪ್ಪಾಗಿ ಪರಿಗಣಿಸುತ್ತದೆ. ಏಕೆಂದರೆ ಪುರುಷರಂತೆ ಮಹಿಳೆಯು ಕೂಡ ಮನುಷ್ಯರಲ್ಲವ? ಆದರೆ ‘ಕಬ್ಬಿನ ಜೆಲ್ಲೆಯ ಸಿಹಿಯನ್ನು ಹೀರಿಕೊಂಡು; ಬರಿ ಕಬ್ಬಿನ ಸಿಪ್ಪೆಯನ್ನು ಉಗಿಯುವ’ ಕೆಲವು ಪುರುಷ ಸಮಾಜಕ್ಕೆ ಧಿಕ್ಕಾರವೇ ಸರಿ. ನಮ್ಮ ದೇಶದ ಹಲವಾರು ಮಹಾನ್ ಸಮಾಜ ಸುಧಾರಕ ನಾಯಕರ ಶ್ರಮದ ಫಲವಾಗಿ ಹೆಣ್ಣಿಗೆ ಒಂದು ಉತ್ತಮ ಸ್ಥಾನ ಲಭಿಸಿರುವುದು ಅಕ್ಷರ ಸಹ ಖಂಡಿತ. ಮೊದಲಿಗೆ ಭಾರತಕ್ಕೆ ಬಂದಂತಹ ಬ್ರಿಟಿಷರು ಪ್ರತಿಯೊಬ್ಬ ಮನುಷ್ಯನಿಗೂ ಅಕ್ಷರ ಕಲಿಕೆಯಲ್ಲಿ ಶಿಕ್ಷಣವನ್ನು ಜಾರಿಗೊಳಿಸಿದ್ದರಿಂದಲೇ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವಲ್ಲಿ ಮಹಾನ್ ಜ್ಯೋತಿಬಾಪುಲೆ ಹಾಗೂ ಸಾವಿತ್ರಿಬಾಯಿಪುಲೆಯವರು ಸ್ವತಃ ತಮ್ಮ ಪತಿಯೊಡನೆ ಶಿಕ್ಷಣ ಪಡೆದು ತಾವು ಕೂಡ ಶಿಕ್ಷಕಿಯಾದಂತಹ ‘ಮೊದಲ ಅಕ್ಷರದ ಅವ್ವ’ ಎಂದು ಬೆಳಗಿದ ಮಹನೀಯರು. ಇಂತಹ ಮಹನೀಯರ ಕಾಲಘಟ್ಟದಲ್ಲಿ ಮುಂದೊಂದು ದಿನ ಡಾ. ಬಾಬಾಸಾಹೇಬ್ ಅಂಬೇಡ್ಕರ್, ರಾಜಾರಾಮ್ ಮೋಹನ್ ರಾಯ್ ಅವರ ಶ್ರಮದ ಫಲ ಹಾಗೂ ಅದಕ್ಕಿಂತ ಮುಂಚೆ 12ನೇ ಶತಮಾನದಲ್ಲಿ

**Please cite this article as:** ಸಿದ್ದೇಶ ಮತ್ತು ಟಿ.ಕೆ.ಕೆಂಪೇಗೌಡ. (2025). ‘ಸಗ್ಗ ಸುಖವನು ಬಯಸಿ’ ಕಥಾಸಂಕಲನದಲ್ಲಿ ಬದುಕಿನ ಪಾಠ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 79–84

ಕಾಣಿಸಿಕೊಂಡ ಅದ್ವಿತೀಯರಾದ ವಚನಕಾರರು ಸಾಮಾಜಿಕವಾಗಿ ಮಹಿಳೆಯರ ಸಬಲತೆಗಾಗಿ ಧೈರ್ಯದಿಂದ ಅನುಭವ ಮಂಟಪದಲ್ಲಿ 'ಹೆಣ್ಣು ಆಬಲೆಯಲ್ಲ ಸಬಲೆ' ಎಂದು ತೋರಿಸಿ ಕೊಡುತ್ತಾ ಮೊದಲ ಮಹಿಳಾ ವಚನಗಾರ್ತಿಯಾಗಿ ಹೆಣ್ಣುಮಕ್ಕಳಿಗೆ ಸ್ಪೂರ್ತಿದಾಯಕರಾಗಿದ್ದಾರೆ. ಭಾರತದಲ್ಲಿ ವೇದ ಉಪನಿಷತ್ತುಗಳ ಕಾಲದ ಅನಂತರ ಎಚ್ಚೆತ್ತ ಹಾದಿಯಲ್ಲಿ ಹೆಣ್ಣನ್ನು ಕಂಡ ಯುಗ ಬಸವಯುಗ ಅಕ್ಕಮಹಾದೇವಿ ಶಿವಶರಣೆಯರಲ್ಲಿ ಅಗ್ರಗಣ್ಯಳು. ಶಿವಶರಣೆಯರು ಹೇಗೆ ಅನುಭಾವದ ಮಾರ್ಗದಲ್ಲಿ ಎಚ್ಚೆತ್ತಿದ್ದರು ಎಂಬುದನ್ನು ಶೂನ್ಯ ಸಂಪಾದನೆ ಸೊಗಸಾಗಿ ವರ್ಣಿಸುತ್ತದೆ. ಅನುಭವ ಮಂಟಪದಲ್ಲಿ ಅಲಮಪ್ರಭು ಮತ್ತು ಅಕ್ಕಮಹಾದೇವಿಯರ ಮಧ್ಯೆ ನಡೆದ ಸಂವಾದ ಮಹಿಳೆಯರ ವೈಚಾರಿಕತೆ, ಬೌದ್ಧಿಕತೆಯನ್ನು ಅಲ್ಲೆಗಳೆಯುವವರಿಗೊಂದು ಸವಾಲು.[1] ಇವತ್ತಿಗೂ ಆಧುನಿಕ ಸಮಾಜದಲ್ಲಿ ಹೆಣ್ಣು ಈ ಖಾಸಗೀಕರಣ, ಜಾಗತೀಕರಣ ಮತ್ತು ಉದಾರೀಕರಣದಲ್ಲಿ ಹೆಣ್ಣು ಪ್ರಸ್ತುತ ಪ್ರತಿಯೊಂದು ಸ್ಥಾನದಲ್ಲೂ ಪ್ರಬಲಳಾಗಿ ಜೀವನಪರ್ಯಂತ ಸಮಾಜದೊಳಗೆ ಒಂದು ಛಾಪು ಮೂಡಿಸಿದ್ದಾಳೆ.

ಅದೇ ರೀತಿಯಾಗಿ ಕೆ.ವಿ.ರಾಜೇಶ್ವರಿ ಅವರ 'ಸಗ್ಗ ಸುಖವನ್ನು ಬಯಸಿ' ಎಂಬ ಕಥೆಯಲ್ಲಿ **'ಅಜಿತ'**ನ ಜೀವನದಲ್ಲಿ ಕುಟುಂಬದ ಮುಖ್ಯಸ್ಥನೇ ತಂದೆಯಾಗಿರುವಾಗ ತಮ್ಮ ಜೊತೆಯಲ್ಲಿ ತಂದೆ ಇಲ್ಲದ ಅಸಡ್ಡೆ ಒಂದು ಕಡೆಯಾದರೆ ಸಮಾಜದಲ್ಲಿ ಹೆಣ್ಣಿಗೆ ಗಂಡ ಇದ್ದರೂ ಇಲ್ಲದಂತಿರುವುದು ಆಕೆಯನ್ನು ನೋಡುವ ದೃಷ್ಠಿ ತುಂಬಾ ಹೀನಾಯವಾಗಿರುತ್ತದೆ. ಆದ್ದರಿಂದ ಅಜಿತನಿಗೆ ತಂದೆಯ ಬಗ್ಗೆ ಯಾವುದೇ ರೀತಿಯ ಗೌರವವಿರುವುದಿಲ್ಲ. ತಂದೆ ಪ್ರೀತಿಯಿಂದ ವಂಚಿತನಾಗಿದ್ದ ವ್ಯಕ್ತಿಯಾಗಿರುತ್ತಾನೆ. ಮಮಕಾರದಿಂದ ದೂರ ಸರಿದು ತಾಯಿ ಮತ್ತು ಅಜ್ಜಿಯರೊಡನೆ ಜೀವನ ಸಾಗಿಸಿದ ವ್ಯಕ್ತಿ ಆತನು ಯೌವ್ವನಕ್ಕೆ ಕಾಲಿಟ್ಟಾಗ ತಂದೆ ಸಾವಿನ ವಿಚಾರ ತಿಳಿದು ತಂದೆ ಮಗನ ಮಮಕಾರ, ಪ್ರೀತಿ, ವಾತ್ಸಲ್ಯ, ಬಾಂಧವ್ಯ, ಸಂಬಂಧದಿಂದ ವಂಚಿತನಾಗಿದ್ದ ತಂದೆಯ ಮೇಲೆ ಕಿಂಚಿತ್ತು ಅಯ್ಯೋ ಎಂಬ ಭಾವನೆ ಬಾರದೆ, ಚಿಂತಿಸದೆ ಸಮಾಜದಲ್ಲಿ ಹೆಂಡತಿಗೆ ಗಂಡನಾಗದೆ, ಮಗನಿಗೆ ತಂದೆಯಾಗದೆ, ಅತ್ತೆ–ಮಾವರಿಗೆ ಅಳಿಯನಾಗದೆ ಹೆಣ್ಣಿನ ಅಸಹಾಯಕತೆಗೆ ಕಾರಣನಾದ ತಂದೆ ಮೇಲಿನ ಕೋಪಕ್ಕೆ ಅಜಿತನಿಗೆ ತನ್ನ ತಂದೆ ಸಮಾಜದಲ್ಲಿ ಸತ್ತಂತೆ ಇರುವುದು ಸರಿ ಕಾಣಿಸುತ್ತದೆ.

ಸುಮಂಗಲಿಯಾಗಿ ತವರು ಮನೆಯಿಂದ ಬಂದಂತಹ ಉಡುಗೆ ತೊಡುಗೆಗಳಿಗೆ ಕತ್ತರಿ ಬಿದ್ದು ಮೂಢನಂಬಿಕೆಯಿಂದ ಆಕೆಯನ್ನು ವಿಧವೆಯ ಪಟ್ಟಕೊಡುವ ಸಮಾಜದ ಗೊಡ್ಡು ಸಂಪ್ರದಾಯಕ್ಕೆ ಆಹ್ವಾನ ಕೊಡದೆ ಅಜಿತ ದೃಢನಿರ್ಧಾರದಿಂದ ಇವನ್ನೆಲ್ಲ ತಿರಸ್ಕರಿಸಿ ಕಷ್ಟ–ಸುಖದಲ್ಲಿ ಭಾಗಿಯಾಗದ ತಂದೆ, ಅಗ್ನಿಸಾಕ್ಷಿಯಾಗಿ ಮದುವೆ ಮಾಡಿಕೊಂಡು ನಡು ನೀರಿನಲ್ಲಿ ಕೈ ಬಿಡುವಾಗ ಸಮಾಜವು ಸರಿದೂಗಿಸಿದ ಕಾರಣ ತನ್ನ ಅಚಲ ನಿರ್ಧಾರದಲ್ಲಿ ಬದಲಾವಣೆ ಮಾಡದೆ, ಆ ನೋವು ಅನುಭವಿಸಿದ ಹೆಣ್ಣು ಮಗಳು ಮತ್ತು ಮಗ ಜೀವನದಲ್ಲಿ ಒಂಟಿತನದಿಂದಿದ್ದರೆ ಏನೆಲ್ಲಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಅರಿತುಕೊಂಡಿದ್ದ. ಆದ್ದರಿಂದ ಇಂತಹ ಅವಶ್ಯಕತೆ ಇಲ್ಲದ ತಂದೆಯು ಬದುಕಿದ್ದರು ಸತ್ತಂತಿರುವಾಗ, ಸತ್ತ ವ್ಯಕ್ತಿಯನ್ನು ನೋಡಿದರೂ ಪ್ರಯೋಜನವಿಲ್ಲವೆಂದು ಅಜಿತನು ಕೆಟ್ಟ ಸಂಪ್ರದಾಯ, ಆಚಾರ, ಮೂಢನಂಬಿಕೆಗೆ ಆಸ್ಪದ ಕೊಡದೆ ಇಂತಹ ಅರ್ಥವಿಲ್ಲದ ಸಮಾಜಕ್ಕೆ ವಿರುದ್ಧವಾಗಿರುವುದು ಅಕ್ಷರಸಃ ಸತ್ಯವೆಂದು ಈ 'ಸಗ್ಗ ಸುಖವನು ಬಯಸಿ' ಕಥೆಯಲ್ಲಿ ಹೇಳಿರುವುದು ಕೆಟ್ಟ ಮನಸ್ಥಿತಿ ಹೊಂದಿರುವ ಪುರುಷ ಸಮಾಜಕ್ಕೆ ಧಿಕ್ಕಾರವೆಸದಂತಿದೆ.

[1] ಮಂಗಳಾ, ಚಿ.ನ. *ಎಚ್ಚೆತ್ತ ಹಾದಿಯಲ್ಲಿ ಮಹಿಳೆ.* ಪುಟ. 19

ಸಮಾಜದಲ್ಲಿ ಜೀವನದ ಸವಾಲುಗಳನ್ನು ಎದುರಿಸಬೇಕಾದ ಅನಿವಾರ್ಯಕ್ಕೆ ಕಟ್ಟುಬೀಳುವ ಪ್ರಸಂಗಗಳು ಜೀವನದಲ್ಲಿ ಖಂಡಿತವಾಗಿಯೂ ಬರುತ್ತದೆ. ಆದರೆ ಅದಕ್ಕಾಗಿ ಹೆದರಿಕೊಂಡು ಜೀವನವನ್ನು ಹಾನಿ ಮಾಡಿಕೊಳ್ಳುವುದು ತಪ್ಪಾಗಿ ಪರಿಣಮಿಸುವುದರಿಂದ ಈ 'ಸಗ್ಗ ಸುಖವನು ಬಯಸಿ' ಕಥಾ ಸಂಕಲನದಲ್ಲಿ 'ತಮಸೋಮ ಜ್ಯೋತಿರ್ಗಮಯ' ಎಂಬ ಕಥೆಯಲ್ಲಿ ಪ್ರತಿಯೊಂದು ಜೀವಿಯು ಅಂತಿಮವಾಗಿ ಸಾವಿನಲ್ಲೇ ಮುಕ್ತಾಯವಾಗುವುದು ಸಹಜ. ಹಾಗೆಯೇ ಜೀವನವೆಂಬ ಬದುಕಿನಲ್ಲಿ ಹುಟ್ಟಿದ ವ್ಯಕ್ತಿ ಸಾಯಲೇಬೇಕು. ಆದರೆ ಚಿಕ್ಕ ವಯಸ್ಸಿನಲ್ಲೇ ಸರಿಸುಮಾರು ಯೌವ್ವನದಿಂದ ಜಾರಿ ದಾಂಪತ್ಯದ ಜೀವನಕ್ಕೆ ಕಾಲಿಟ್ಟ ದಂಪತಿಗಳ ಎರಡು ಪುಟ್ಟ ಮಕ್ಕಳು, ತಂದೆಯ ತೋಳಿನಲ್ಲಿ ಬೆಳೆಯಬೇಕಾದ ಕಂದಮ್ಮಗಳನ್ನು ಕಂಡ ಎಂತಹ ವ್ಯಕ್ತಿಗೂ ದುಃಖ ಉಮ್ಮಳಿಸುತ್ತದೆ, ಹೃದಯ ಕಿತ್ತು ಬರುತ್ತದೆ. ಮನಸ್ಸಿನಲ್ಲಿ ಕೊರಗಿನ ಜೀವನ ಉಂಟಾಗುತ್ತದೆ; ಹೌದು ಆದರೆ ಬರುವ ಸಾವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆಕಸ್ಮಿಕವಾಗಿ ಆದ ಮರಣವು ಪ್ರಕೃತಿ ಸಹಜವಾಗಿರುವುದರಿಂದ ಮುಂದಿನ ಕಾರ್ಯಕ್ಕೆ ಮುನ್ನಡೆಯಬೇಕು.

ಇಂತಹ ಪರಿಸ್ಥಿತಿಯ ಎದುರಿಸಲು ಮುಂದಾಗಿರುವ ಹೆಣ್ಣು ಸಹನಾ ಮೂರ್ತಿಯೇ ಸರಿ. ಇಬ್ಬರೂ ಮಕ್ಕಳನ್ನು ತನ್ನ ಮಡಿಲಲ್ಲಿ ನೋಡಿಕೊಳ್ಳುವ 'ಮಾಧವಿ'ಯ ಜೀವನದಲ್ಲಿ ಎಷ್ಟು ದಿನ ಮೌನವಾಗಿರಲು ಸಾಧ್ಯ ಎಂದು ಹೇಳುತ್ತಾ ಮಕ್ಕಳ ಹಸಿವನ್ನು ನೋಡಿಯಾದರೂ ತಾಯಿ ಮೌನ ಮಕ್ಕಳ ಮೇಲೆ ಪರಿಣಾಮ ಬೀರುವುದರಿಂದ 'ಬೇವು ಕಹಿಯಾದರೂ ಅದು ಔಷದಿಯ ಗುಣವುಳ್ಳದ್ದು ತಾನೇ, ಹಾಗೆಯೇ ತನ್ನ ಮಾತುಗಳು ಈಗ ಬೇಡವೆನಿಸಿದ್ದರೂ ಮುಂದಿನ ಬದುಕಿಗೆ ಅದೇ ನಾಂದಿ ಅಲ್ಲವೇ ದುಃಖದ ಜೀವನವನ್ನು ಮರೆಮಾಚಲು ಧೈರ್ಯವಾಗಿ ಎದುರಿಸಬೇಕಾಗುತ್ತದೆ'.[2] ಒಂದು ಒಳ್ಳೆಯ ಮಾತು, ಮನಸ್ಸಿಗೆ ಸಾಂತ್ವಾನ ಜೀವನದ ಅಳವಡಿಕೆಗೆ ಬೇಕಾಗುತ್ತದೆ. ಮಾಧವಿಯ ಗಂಡ ಸತ್ತನೆಂದು ಅವರ ತಂದೆ–ತಾಯಿ ಮಗಳು, ಮಕ್ಕಳನ್ನು ಊರಿಗೆ ಕರೆದುಕೊಂಡು ಹೋಗಲು ಸಿದ್ದರಿದ್ದರು. ಆದರೆ ಅದು ಆಕೆಯ ಸ್ವಾಭಿಮಾನಕ್ಕೆ ಅಡ್ಡಿ ಆಗುತ್ತಾ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿರುವುದರಿಂದ ಜೀವನದ ಪಾಠವನ್ನು ಒಂದು ದಾಂಪತ್ಯದ ಜೀವನದಲ್ಲಿ ಕಲಿತುಕೊಂಡು ತಂದೆ–ತಾಯಿಗೆ ಭಾರವಾಗಬಾರದಂತೆ ಮಾತನಾಡಿದರು.

ತವರು ಮನೆಯಿಂದ ಮದುವೆಯಾಗಿ ಗಂಡನ ಮನೆ ಸೇರಿದಾಗ ನಮ್ಮ ಜನಪದರು ಒಂದು ಗಾದೆಯಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎನ್ನುವ ಕಾಲದಲ್ಲಿ ತವರು ಮನೆಯಲ್ಲಿ ಇಬ್ಬರು ಅಣ್ಣಂದಿರಿಗೂ ಮದುವೆ ಆಗಿರುವುದರಿಂದ ಅಣ್ಣ ನಮ್ಮವನಾದರೂ ಅತ್ತಿಗೆ ನಮ್ಮವರ? ಎಂಬ ಪ್ರಶ್ನೆ ಮೂಡಿರುವುದು ಸಹಜ. ಏಕೆಂದರೆ ಮಾಧವಿ ಯೋಚನೆಯ ಪ್ರಕಾರ ಮನೆಯಲ್ಲಿ ತಂದೆ ತಾಯಿಯವರನ್ನು ನೋಡಿಕೊಳ್ಳುತ್ತಾ ಇರುವಾಗ ಅವರಿಗೆ ನಾವು ಕೂಡ ಭಾರವಾದರೆ ಮುಂದೊಂದು ದಿನ ಜಗಳ ಮನಸ್ತಾಪ ಉಂಟಾಗಿ ತನ್ನಿಂದ ಕೇಡಾಗಬಾರದೆಂಬ ಶುದ್ಧ ಹಾಲಿನಂತ ಮನಸ್ಸುಳ್ಳ ಮಾಧವಿ ಜೀವನದ ಹಾದಿಯಲ್ಲಿ ಒಂಟಿ ಹೆಣ್ಣಿನ ಜೀವನ ತುಂಬಾ ಕಷ್ಟಕರವಾಗಿರುತ್ತದೆ. ಸಮಾಜವು ಆಕೆಯನ್ನು ನೋಡುವ ರೀತಿಯಲ್ಲಿ ಮತ್ತು ಯೌವ್ವನದಲ್ಲೆ ಚಿಕ್ಕವಯಸ್ಸಿಗೆ ಗಂಡ ತೀರಿಕೊಂಡಾಗ ಸಮಾಜದಲ್ಲಿ ಕೆಟ್ಟ ದೃಷ್ಟಿಗಳಿಂದ ತಪ್ಪಾಗಿ ಪರಿಣಮಿಸುತ್ತದೆ. ಮಾನವೀಯತೆ ಸ್ಪಷ್ಟ ಉತ್ತರವನ್ನು ಅದ್ಭುತವಾಗಿ ಕಥೆಯಲ್ಲಿ ಭಿತ್ತರಿಸಿದ್ದಾರೆ. 'ಅಪ್ಪಾ ನಾನು ಗಂಭೀರ ನಿರ್ಧಾರ ಮಾಡಿದ್ದೇನೆ. ನಾನು ಸರಿಯಾಗಿ ನಡ್ಕೋಳ್ಳೊವರೆಗೂ ಅವರು ಯಾರು ನನ್ನನ್ನು ಏನು ಮಾಡೋಕಾಗಲ್ಲ. ಯಾಕೆಂದರೆ ಎರಡು ಕೈ

[2] ರಾಜೇಶ್ವರಿ, ಕೆ.ವಿ. *ಸಗ್ಗ ಸುಖವನು ಬಯಸಿ.* ಪುಟ. 83

ಸೇರಿದ್ರೆನೇ ಚಪ್ಪಾಳೆ ತಟ್ಟುವುದಕ್ಕೆ ಆಗೋದು.' ಎಂದು ಅಚಲ ನಿರ್ಧಾರವನ್ನು ಕೈಗೊಂಡಿರುವುದು, ಹೆಣ್ಣು ಮನಸು ಮಾಡಿದರೆ ಏನು ಬೇಕಾದರೂ ಮಾಡುವಂತಹ ಶಕ್ತಿ ಆಕೆಯಲ್ಲೇ ಇರುವಾಗ ಛಲದಿಂದ ವರ್ತಿಸಿದಳು. ಯೌವ್ವನದಿಂದ ತುಂಬಿಕೊಂಡ ಇನ್ನೂ ಚಿಕ್ಕವಯಸ್ಸಿನಲ್ಲಿರುವುದರಿಂದ ಮಾನಸಿಕವಾಗಿ, ದೈಹಿಕವಾಗಿ, ಬದಲಾವಣೆಗಳು ಆಗುವ ಸಹಜ ನಿಯಮವನ್ನು ಅರಿತುಕೊಂಡಿದ್ದ ತನ್ನ ತಾಯಿ ಆಕೆಯನ್ನು ಬಲಪಡಿಸಲು ಮತ್ತೊಂದು ಮದುವೆಯ ವಿಷಯವನ್ನು ಪ್ರಸ್ತಾಪಿಸಿದರೂ, ಆಕೆಯದು ದೃಢನಿರ್ಧಾರವಾಗಿರುವುದರಿಂದ ಅದರ ಸುಳಿವೇ ಇಲ್ಲವೆಂದು ನಿಭಾಯಿಸಲು ಮತ್ತು ತನ್ನ ಗಂಡನ ಕೆಲಸವನ್ನು ಧೈರ್ಯವಾಗಿ ಎದುರಿಸಲು ಆಫೀಸಿಗೆ ಹೊರಡಲು ಸಿದ್ಧಳಾಗಿದ್ದಳು.

ಕೆಲಸದಲ್ಲಿ ನಿರತಳಾಗಿದ್ದ ಮಾಧವಿ ಕಾಲ ಕಳೆದಂತೆ ಮಕ್ಕಳು ಶಾಲೆಗೆ ಹೋಗಲು ಹಾಗೂ ತನ್ನ ತಾಯಿಗೆ ಸಹಾಯಕರಾಗಿ ಸಹಜ ಮತ್ತು ಸಹದೇವ ಇಬ್ಬರು ಕೂಡ ಪ್ರೀತಿಯಿಂದ ತಾಯಿ ಹೇಳಿದ ಹಾಗೆ ಕೇಳಿ ತಮ್ಮ ಕೆಲಸವನ್ನು ತಾವೇ ನೋಡಿಕೊಳ್ಳುತ್ತಿದ್ದರು. ಮಮತೆಯ ಮಡಿಲಲ್ಲಿ ಬೆಳೆದ ಮಕ್ಕಳು ಕುಟುಂಬದ ಜೀವನವನ್ನು ಅರ್ಥೈಸಿಕೊಳ್ಳುತ್ತಾ ತಾಯಿ ಪ್ರೀತಿಯಿಂದ ಅವರಿಗೆ ಬಯ್ಯದೆ–ಹೊಡೆಯದೆ ಪ್ರೋತ್ಸಾಹಿಸುತ್ತಾ ಜೀವನ ನಡೆಸುತ್ತಿದ್ದಳು. ಇಂದಿನ ಮಕ್ಕಳಿಗೂ ಹಾಗೆಯೇ ಬೆರಳು ತೋರಿಸಿದರೆ ಹಸ್ತವನ್ನೇ ನುಂಗುವ ಈಗಿನ ಸಂದರ್ಭದಲ್ಲಿ ವಿಜ್ಞಾನ–ತಂತ್ರಜ್ಞಾನಗಳ ಕಾಲದಲ್ಲಿ ಮಕ್ಕಳು ಮೊಬೈಲ್ ಬಳಕೆಗಳಿಂದ ಹಾಳಾಗುವ ಸಾಧ್ಯತೆ ತಮ್ಮ ಇತಿಮಿತಿಗಳಿಂದ ಗೊತ್ತಾಗುತ್ತದೆ. ಆದ್ದರಿಂದ ಮಕ್ಕಳನ್ನು ಆದಷ್ಟು ಹತ್ತಿರದಿಂದ ಪ್ರೀತಿಯಿಂದ, ಮಮತೆಯಿಂದ ಬೆಳೆಸಿದರೆ ಈಗಿನ ಮಕ್ಕಳು ಏನು ಬೇಕಾದರೂ ಆಗಬಹುದು. 'ನೂಲಿನಂತೆ ಸೀರೆ ತಾಯಿಯಂತೆ ಮಗಳು' ಎನ್ನುವ ಹಾಗೆ ಇರುತ್ತದೆ.

ಜೀವನದ ಹಾದಿಯಲ್ಲಿ ಹೇಳಿಕೆ ಮಾತುಗಳು ನಮ್ಮದಲ್ಲದ ವಿಷಯಗಳಿಗೆ ತಲೆ ಕೆಡಿಸಿಕೊಳ್ಳಬಾರದು ಏಕೆಂದರೆ, ಸುರಭಿ ಅಂತ ಸ್ನೇಹಿತರು ಮಾಧವಿಗೆ ಕೇಳುತ್ತಾಳೆ, 'ಮಧು ಸಂಸಾರ ಜೀವನವನ್ನು ಅನುಭವಿಸಿದ ನಿನಗೆ ಈಗ ಅದು ಬೇಕು ಅಂತ ಅನ್ನಿಸುವುದಿಲ್ಲವೇ! ಎಷ್ಟೋ ಜನ ಕಾಮವನ್ನು ಹದ್ದಿನಲ್ಲಿಟ್ಟುಕೊಳ್ಳಲಾರದೆ ಕಾಲು ಜಾರುತ್ತಾರಲ್ಲವೆ? ಎಂದು ಕೇಳಿದಾಗ ಮಾಧವಿಯ ಉತ್ತರವು ತಲೆಕೆಡಿಸುವಂತೆ ಸ್ನೇಹಿತೆಯರಿಗೆ ಮದವನ್ನು ಅಡಗಿಸುವಂತಹ ಅಂಕುಶವಾಗಿ ಉತ್ತರ ಎಷ್ಟೇ ಬಾರಿ ನಾವು ನೀರನ್ನು ಕುಡಿಯಲು ಮಾತ್ರ ಬಯಸುತ್ತೇವೆ, ಬಾಯಾರಿಕೆ ಅಂತ ಕೊಚ್ಚೆ ನೀರು ಕುಡಿಯುವುದಕ್ಕೆ ನಮಗೆ ಎಂದಾದರೂ ಸಾಧ್ಯವಿದೆಯಾ ಎಂದು ಸುರಭಿ ಎಚ್ಚರಿಸಿದಳು.'[3] ಉತ್ತಮವಾದ ಶಿಕ್ಷಣದೊಂದಿಗೆ ಮಕ್ಕಳ ಭವಿಷ್ಯವನ್ನು ತಿದ್ದಿ ತಮ್ಮ ಕಾಲ ಮೇಲೆ ನಿಂತುಕೊಳ್ಳುವ ಹಾಗೆ ಕೆಲಸಕ್ಕೆ ಸೇರುವಂತೆ ಹೆಚ್ಚಿನ ಅಂಕಗಳೊಂದಿಗೆ ಮುಂದೆ ಮಗಳು ಬ್ಯಾಂಕಿನಲ್ಲಿ ಕೆಲಸ ಮತ್ತು ಮಗನನ್ನು ಎಂ.ಎ ಸ್ನಾತಕೋತ್ತರ ಪದವಿಯವರಿಗೆ ಓದಿಸುತ್ತಾ, ಮಗಳು ತಾನು ಇಷ್ಟ ಹುಡುಗನೊಂದಿಗೆ ಮದುವೆ ಮಾಡಿಸಲು ಮುಂದಾಗುತ್ತಾಳೆ. ತನ್ನ ಒಪ್ಪಿಗೆಯ ಮೇರೆಗೆ ಸಂತೋಷದಿಂದ ಮಗಳ ಆಸೆ, ಸಂತೋಷವೆ, ಮುಖ್ಯವೆಂದು ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಿಸಿ ಎರಡು ಹೃದಯಗಳು, ಮನಸುಗಳು ಒಂದೆಡೆ ಸೇರಿವಂತೆ ಪ್ರೀತಿಗೆ ಬೆಂಬಲಿಸಿ ಜಾತಿ ಬೇಕಿಲ್ಲ ಎಂದು ಇಬ್ಬರಿಗೂ 'ಜಾತಿ ಎಂಬ ಗೋಡೆಯನ್ನು ಹೊಡೆದು ಮದುವೆ ಮಾಡುತ್ತಾಳೆ.' ಮಾಧವಿ ಎಂಬ ಹೆಣ್ಣಿನ ಬಾಳಿನಲ್ಲಿ ಸಮಾಜದಲ್ಲಿನ ವ್ಯಂಗ್ಯಕ್ಕೆ ಹೆದರದೆ ಮೊದಲಿಂದ ಕೊನೆಯ ತನಕ ಕಷ್ಟಪಟ್ಟು ಸಾಕಿ ಸಲುಹಿದವಳೆಂಬ ಅಧಿಕಾರದಿಂದ ಸಮಾಜಕ್ಕೆ ಹೆದರುವ ಅಗತ್ಯವೆಲ್ಲಿದೆ ಎಂದು ಸ್ವಯಂ ನಿರ್ಧಾರಕ್ಕೆ ಅಚಲಳಾಗಿ ಧೈರ್ಯದಿಂದ ನಿಲ್ಲುವುದು ಸ್ತ್ರೀ ಸಬಲತೆಯನ್ನು ತೋರುತ್ತದೆ.

[3] ಅದೇ. ಪುಟ. 89, 90

ಮಗನ ಓದಿನ ವಿಷಯ ಮುಗಿದು ನಿರುದ್ಯೋಗಿಯಾದಾಗ ಸಮಾಜದಲ್ಲಿ ಶಿಕ್ಷಣ ಮುಗಿದ ನಂತರ ಬರುವ ಸಮಸ್ಯೆಯಾಗಿದ್ದು, ಓದಿದ ತಕ್ಷಣ ಕೆಲಸ ಸಿಗದೇ ಇರಬಹುದು ಆದ್ದರಿಂದ ಕೆಲಸ ಸಿಗುವವರೆಗೂ ತಾಳ್ಮೆಯಿಂದ ಧೃತಿಗೆಡದೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು. ಮಗನಿಗೆ ಬ್ಯಾಂಕಿನಲ್ಲಿ ಕೆಲಸ ಸಿಕ್ಕ ಮೇಲೆ ತುಂಬಾ ಖುಷಿ ಪಡುತ್ತ ಮಗನಿಗೆ ಅನಾಥಾಶ್ರಮದಲ್ಲಿ ಹೆಣ್ಣು ನೋಡಿ ಮದುವೆ ಮಾಡಿದಳು. ಆದರೆ ಸಬಂಧಿಕರು, ಸ್ನೇಹಿತರು ಇವರ ಬಗ್ಗೆ ಏನೇ ಮಾತನಾಡಿದರೂ ಕಿವಿಗೊಡದೆ ಅನಾಥರಾದರೇನು? ಅನ್ಯಜಾತಿಯಾದರೇನು? ಯಾರ ಸಂತಾನವಾದರೇನು? ಅವಳು ಒಬ್ಬ ಹೆಣ್ಣು ಮಗಳು, ಅವಳಿಗೂ ಮನಸ್ಸಿದೆ ಎಂದು ತಿಳಿಸುತ್ತಾ ಅರ್ಥ ಮಾಡಿಸುವಳು. ಜನಗಳ ನಡುವೆ ಮಾಧವಿ ಸೊಸೆಗೆ ಅತ್ತೆಯಾಗಿರುವುದಕ್ಕಿಂತ ತಾಯಿಯ ಸ್ಥಾನ ನೀಡಿದಳು. ತನ್ನ ಇಡೀ ಜೀವನದ ಬದುಕಿನಲ್ಲಿ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಯಿಂದ ಕಾಣುವ ಮನಸ್ಸಿರಬೇಕು. ನಿವೃತ್ತಿ ಸಮಯದಲ್ಲಿ ಕೆಲವು ಹಂಬಲಗಳು ಸಮಾಜ ಸೇವೆಗಾಗಿ ತನ್ನ ಮುಂದಿನ ದಿನಗಳು ವೃದ್ಧಾಶ್ರಮದಲ್ಲಿ ಹಿರಿಯ ಜೀವಿಗಳ ಸೇವೆಗಾಗಿ ಮುಡಿಪಾಗಬೇಕೆಂದು ಸೊಸೆ ಮತ್ತು ಅಳಿಯ ಉನ್ನತ ಸ್ಥಾನದಲ್ಲಿದ್ದರೂ ಕಡೆಗಣಿಸಿ ಸ್ವಯಂ ಮನೆ ತೊರೆದು ವೃದ್ಧಾಶ್ರಮದ ಕಡೆ ಪಯಣಿಸಿದರು. ಪ್ರೀತಿಯಿಂದ ನೋಡಿದರೆ ಕಲ್ಲು ಕೂಡ ಮೃದುವಾಗಿ ಕಾಣಿಸುತ್ತದೆ ಎಂಬಂತೆ ಒಳ್ಳೆಯತನ, ಪ್ರೀತಿ, ಸಮಾಜಕ್ಕೆ ಮಾದರಿಯಾಗಿ ನಿಂತಿದೆ.

'ಸುದ್ದಿಯಾಗುವವರು' ಎಂಬ ಕಥೆಯಲ್ಲಿ ಶಿಕ್ಷಣ ಪಡೆದ ಹೆಣ್ಣು ಮಗಳು ಅಜ್ಞಾನಿಗಳ ಮನೆಗೆ ಮದುವೆ ಮಾಡಿದರೆ ಬಿ.ಎ ಓದಿದಂತಹ ಮುಗ್ದ ಹೆಣ್ಣು ಮಗಳನ್ನು ದುಬೈನಲ್ಲಿ ಆಯಾ ಕೆಲಸಕ್ಕೆಂದು ತಮ್ಮಗಳ ಲಾಭಕ್ಕೋಸ್ಕರ ಮತ್ತು ಸ್ವಾರ್ಥ ಜೀವನಕ್ಕಾಗಿ ಮಗಳಂತೆ ಇರುವ ಸೊಸೆಯನ್ನು ಹೊರದೇಶಕ್ಕೆ ಕಳುಹಿಸಿ ಅವರ ಮನೆಯ ಹೆಣ್ಣು ಮಕ್ಕಳು, ರೋಗಿಷ್ಟನಾದ ಮಾವ, ಹಠ ಹಿಡಿದ ಅತ್ತೆ, ಸೋಂಬೇರಿ ಗಂಡನ ಜೀವನದಲ್ಲಿ 'ಮಾಲಾಳ' ಬದುಕು ಛಿದ್ರವಾಗಿರುತ್ತಿರುವುದು ಅತ್ತೆ ಮಾವರ ಮನೆಯಲ್ಲಿ ಪ್ರೀತಿಯ ಬೆಲೆಯೇ ತಿಳಿಯದೆ ಅನಾಗರಿಕರ ಒಡನಾಟದಲ್ಲಿ ತಾಳ್ಮೆಯಿಂದ ಸಹನೆಯ ಪ್ರತಿಕವಾಗಿ ಮನೆಯವರ ಮಾತಿಗೆ ತಲೆಯಾಡಿಸುತ್ತಾ ಸಂಪಾದನೆ ಮಾಡುವ ಒಬ್ಬ ಯಂತ್ರವಾಗಿದ್ದಾಳೆ. ಮನೆಯಲ್ಲಿ ದುಡ್ಡಿನ ದುರಾಸೆಗೆ ಬಿದ್ದಿರುವ ಈ ಒಂದು ನರಕಯಾತನೆ ಯಾವ ಹೆಣ್ಣಿಗೂ ಬರಬಾರದು. ಮಾಲಾಳನ್ನು ಮೂರು ವರ್ಷದ ಅಗ್ರಿಮೆಂಟಿಗೆ ಆಯಾ ಕೆಲಸದವಳಾಗಿ ಕೆಲಸ ಮಾಡಿಸಿದರು. ದುಡ್ಡಿನ ದುರಾಸೆ ಮೂರು ಜನ ಹೆಣ್ಣು ಮಕ್ಕಳು, ಜೊತೆಗೆ ಇನ್ನೂ ಇಬ್ಬರು ಮದುವೆ ಮಾಡಲು ಒಂಟಿಯಾಗಿ ಮತ್ತೆ ದುಬೈಗೆ ಬಲವಂತದಿಂದ ದುಡಿಸುವ ಕ್ರೌರ್ಯ, ಹಿಂಸೆಯಲ್ಲಿ ನಲುಗಿರುತ್ತಾಳೆ.

ಮಾಲಾ ತನ್ನೆಲ್ಲ ಅಳಲುಗಳನ್ನು ಅಮಿತಾ ಎಂಬ ಸ್ನೇಹಿತೆಯೊಡನೆ ಹಂಚಿಕೊಂಡಳು. ಮನೆಯಲ್ಲಿ ಏಳು ಜನರಲ್ಲಿ ಮೂರು ಜನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸಿ, ಮಾವನಿಗೆ ರೋಗದಿಂದ ಗುಣಪಡಿಸಿ, ಮನೆಯಲ್ಲಿ ಸಂಪಾದನೆಯು ಜೀವನಕ್ಕೆ ಇವಳ ದುಡಿತವೇ ಕಾರಣವಾಗಿದ್ದರೂ ಅತ್ತೆ ಮಗನಿಗೆ ಮತ್ತೊಂದು ಮದುವೆಯ ಪತ್ರವನ್ನು ಬರೆದಿರುವ ತಾಯಿ ಹೇಳಿಕೆಯನ್ನು ಕೇಳಿ ದುಬೈಯಿಂದ ಹೊರಟು ಬಂದವಳು ತನ್ನ ಅಸ್ಥಿತ್ವದ ಹಕ್ಕಿನ ಅರಿವಿನಿಂದ ಪ್ರಶ್ನಿಸಲು ಹೊರಟಳು. ಶಿಕ್ಷಣ ಪಡೆದಂತಹ ಹೆಣ್ಣಿನ ಮನಸ್ಥಿತಿ ಆಕೆಯ ಕರುಣೆ, ಪ್ರೀತಿಯಿಂದ ಅವರು ಹೇಳಿದ ಹಾಗೆಲ್ಲ ಕೇಳಿದರು ತನ್ನ ಶೀಲದ ಬಗ್ಗೆ ಹಾಗೂ ಗಂಡನ ಮತ್ತೊಂದು ಮದುವೆಯ ಬಗ್ಗೆ ಮಾಲ ಒಪ್ಪಿಗೆ ಪಡೆದ ಎರಡನೇ ಮದುವೆಗೆ ತನ್ನ ಗಂಡ, ಅತ್ತೆ, ಮಾವ, ನಾದಿನಿಯ ದಬ್ಬಾಳಿಕೆಗೆ ಸೆಡ್ಡು ಹೊಡೆದು ತನ್ನಿಂದಲೇ ಸಂಸಾರ ನಡೆಯುತ್ತಿರುವುದನ್ನು ಮರೆತಂತಹ ನೀಚ ಕುಟುಂಬಕ್ಕೆ ಧಿಕ್ಕಾರವಿರಲು ಸವಾಲಿನಿಂದ ಹೆಣ್ಣು

ಒಲಿದರೆ ನಾರಿ ಮುನಿದರೆ ಮಾರಿ ಎಂಬುದನ್ನು ಕೆಟ್ಟ ಪರಿಸ್ಥಿತಿ, ವ್ಯವಸ್ಥೆ, ಅವಳನ್ನು ತನ್ನ ಹಕ್ಕಿಗೆ ಮುಂದಿನ ಜೀವನದ ಹಾದಿಗೆ ತಾನೇ ನಿರ್ಧಾರ ಕೈಗೊಂಡು ಎದುರಿಸಿ ನಿಲ್ಲುತ್ತಾಳೆ. ಇಂತಹ ಪರಿಸ್ಥಿತಿ ಎದುರಾಗುವ ಮೊದಲೇ ಅವರ ಆಸೆ ಆಕಾಂಕ್ಷೆಗಳನ್ನು ತಿಳಿದು ಹೆಣ್ಣು ಮಕ್ಕಳು ಅವರ ಆಸೆ ಆಮಿಷಗಳಿಗೆ ತಲೆಯಾಡಿಸದೆ ಶಿಕ್ಷಣ ಪಡೆದಂತಹ ಸ್ತ್ರೀ ಕುಲ ಅವರಿಗೆ ತಕ್ಕ ಪಾಠ ಕಲಿಸುವ ಮೂಲಕ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಮುಂದಾಗಬೇಕು. 'ಮದುವೆಗಳಿಗೆ ಸಾಮಾನ್ಯವಾಗಿ ಪ್ರೇಮದ ಬುನಾದಿ ಇರುವುದಿಲ್ಲ. ಗಂಡನೆಂಬಾತ ಪ್ರೀತಿ ಪಾತ್ರನಾದ ಗಂಡಸಿನ ಬದಲಿಗೆ ಬಂದ ವ್ಯಕ್ತಿಯೇ ಹೊರತು ಆ ಪ್ರೀತಿ ಪಾತ್ರ ವ್ಯಕ್ತಿಯೇ ಆಗಿರುವುದಿಲ್ಲ. ಎನ್ನುತ್ತಾನೆ ಫ್ರಾಯ್ಡ್ ಹೀಗೆ ತಾಳ ತಪ್ಪುವುದು ಆಕಸ್ಮಿಕವಲ್ಲ, ಮದುವೆಯ ವ್ಯವಸ್ಥೆಯಲ್ಲೇ ಅದು ಅಡಕವಾಗಿದೆ. ಸಮಾಜದ ಹಿತ ಕಾಯಲು ಗಂಡು ಹೆಣ್ಣುಗಳು ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ಒಂದಾಗಬೇಕು ಎಂಬುದು ಮೂಲ ಉದ್ಧೇಶವೇ ಹೊರತು ಅವರಿಬ್ಬರ ಸ್ವಂತ ಸುಖ ಸಂತೋಷಗಳಲ್ಲ.'[4]

ಆದ್ದರಿಂದ ಜೀವನದಲ್ಲಿ ಸಮಸ್ಯೆಗಳು ಪ್ರತಿಯೊಬ್ಬ ಮನುಷ್ಯನಿಗೂ ಯಾವುದೋ ಒಂದು ರೀತಿಯಲ್ಲಿ ಕಾಡುವುದು ಸಹಜ. ಅದಕ್ಕಾಗಿ ನಮ್ಮ ಮನಸ್ಥಿತಿಗಳು, ಅನವಶ್ಯಕ ನಿರ್ಧಾರಗಳು, ಆಪತ್ತುಗಳಿಗೆ ಎಡೆಯಾಗದೇ ಧೈರ್ಯದಿಂದ ಮನಸ್ಸನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು, ತಾಳ್ಮೆಯಿಂದ ಪ್ರತಿಯೊಂದು ಸಮಸ್ಯೆಗಳಿಗೂ ಪರಿಹಾರ ಇರುವುದರಿಂದ ಅದರ ಬಗ್ಗೆ ಚಿಂತಸಿ ಜಾಗರೂಕತೆಯಿಂದ ಆ ಸಮಸ್ಯೆಯನ್ನು ಎದುರಿಸಿಲು ಪ್ರಯತ್ನಿಸಬೇಕೇ ಹೊರತು ನಮಗೆ ನಾವೇ ಆಪತ್ತು ತಂದುಕೊಳ್ಳುವುದರಲ್ಲಿ ಏನು ಪ್ರಯೋಜನವಿಲ್ಲ. 'ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರುಷ ಆಯಸ್ಸಂತೆ' ಎನ್ನುವ ಹಾಗೇ ಸಮಸ್ಯೆಗಳು ಮನುಷ್ಯನಿಗೆ ಬರದೆ ಮರಕ್ಕೆ ಬರುವುದೆ ಎಂಬಂತೆ ಜೀವನದಲ್ಲಿನ ಸವಾಲುಗಳನ್ನು ಎದುರಿಸುವಂತೆ ಈ ಕಥೆಗಳಲ್ಲಿ ಮೂಡಿರುವುದು ನಿಜ ಜೀವನದಲ್ಲಿ ಅನೇಕರ ಸಮಸ್ಯೆಗಳು ಆಗಿರುತ್ತದೆ.

**ಆಕರ ಗ್ರಂಥ**


- ರಾಜೇಶ್ವರಿ, ಕೆ.ವಿ. (2013). *ಸಗ್ಗ ಸುಖವನು ಬಯಸಿ.* ಸಾಹಿತ್ಯ ಸುಗ್ಗಿ.


**ಪರಾಮರ್ಶ ಗ್ರಂಥಗಳು**


- ಮಂಗಳಾ. (1990). *ಎಚ್ಚೆತ್ತ ಹಾದಿಯಲ್ಲಿ ಮಹಿಳೆ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ಶ್ರೀಮತಿ, ಎಚ್.ಎಸ್. (2020). ಸಿಮೊನ್ ದ ಬೋವಾ ದ ಸೆಕೆಂಡ್ ಸೆಕ್ಸ್. ಸಂಕಥನ.


[4] ಶ್ರೀಮತಿ, ಎಚ್.ಎಸ್. *ಸಿಮೊನ್ ದ ಬೋವಾ ದ ಸೆಕೆಂಡ್ ಸೆಕ್ಸ್.* ಪುಟ. 12